ಭಾರತ ತಂತ್ರಜ್ಞಾನ ಕ್ಷೇತ್ರದಲ್ಲಿ ಮುಂಚೂಣಿಯ ರಾಷ್ಟ್ರವಾಗಿದ್ದು, ದೇಶದ ಅಭಿವೃದ್ಧಿಗೆ ಪೂರಕವಾಗಿ ಪದವಿ ನಂತರ ವಿದ್ಯಾರ್ಥಿಗಳು ತಮ್ಮ ಜೀವನವನ್ನು ರೂಪಿಸಿಕೊಳ್ಳಬೇಕು. ಬರುವಂತಹ ದಿನಗಳಲ್ಲಿ ಭಾರತ ವಿಶ್ವಗುರು ಸ್ಥಾನ ಅಲಂಕರಿಸಲಿದೆ
● **ಥಾವರ್‌ಚಂದ್ ಗೆಹ್ಲೋಟ್** ರಾಜ್ಯಪಾಲರು



# ಬಡತನದಲ್ಲೇ ಅರಳಿದ ಚಿನ್ನದ ಪ್ರತಿಭೆಗಳು

## ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 13ನೇ ವಾರ್ಷಿಕ ಘಟಿಕೋತ್ಸವದಲ್ಲಿ ಚಿನ್ನದ ಪದಕ, ಪ್ರಮಾಣ ಪತ್ರ ಸ್ವೀಕಾರ

● **ಕನ್ನಡಪ್ರಭ ವಾರ್ತೆ** ಬೆಳಗಾವಿ

ಬಡತನದ ಬೇಗೆಯಲ್ಲೇ ಕಷ್ಟ ಪಟ್ಟು ಓದಿ ಚಿನ್ನದ ಬೇಟೆಯಾಡುವ ಮೂಲಕ ಬಡತನ ಸಾಧನೆಗೆ ಅಡ್ಡಿ ಆಗದು ಎಂಬುದನ್ನು ಈ ಮಕ್ಕಳು ಸಾಬೀತುಪಡಿಸಿದ್ದಾರೆ. ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 13ನೇ ವಾರ್ಷಿಕ ಘಟಿಕೋತ್ಸವದಲ್ಲಿ ಗಣ್ಯರಿಂದ ಚಿನ್ನದ ಪದಕದೊಂದಿಗೆ ಪ್ರಮಾಣ ಪತ್ರ ಸ್ವೀಕರಿಸಿದರು. ಈ ಘಳಿಗೆಗೆ ಮಕ್ಕಳ ಪೋಷಕರು ಸಾಕ್ಷಿಯಾದರು. ತಮ್ಮ ಮಕ್ಕಳ ಸಾಧನೆ ಕಂಡು ಹಿರಿಹಿರಿ ಹಿಗ್ಗಿದರು. ಕಣ್ಣಲ್ಲಿ ಆನಂದ ಭಾಷ್ಪವೂ ಹರಿಯಿತು. ತಮ್ಮ ಮಕ್ಕಳನ್ನು ಬೆನ್ನು ತಟ್ಟಿ ಪ್ರೋತ್ಸಾಹಿಸಿದರು. ಹೌದು, ಬಡತನದಲ್ಲಿ ಉನ್ನತ ವ್ಯಾಸಂಗ ಮಾಡಿ, ಅದರಲ್ಲಿಯೂ ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳ ಕಥೆ ಎಲ್ಲರದ್ದೂ ಒಂದೊಂದು ತರ.

**ಆಶಾ ಕಾರ್ಯಕರ್ತೆ ಮಗನಿಗೆ 2 ಚಿನ್ನದ ಪದಕ:** ಅಥಣಿ ತಾಲೂಕಿನ ಅರಟಾಳ ಗ್ರಾಮದ ಶಿವಶಂಕರ ಕಾಂಬಳೆ ಅವರು ಎಂಎ ಕನ್ನಡ ವಿಭಾಗದಲ್ಲಿ ಎರಡು ಚಿನ್ನದ ಪದಕ ಪಡೆದಿದ್ದಾರೆ. ತಂದೆ ಕೂಲಿ ಕೆಲಸ ಮಾಡುತ್ತಿದ್ದರೆ, ತಾಯಿ ಆಶಾ ಕಾರ್ಯಕರ್ತೆ. ಈ ಎರಡೂ ಚಿನ್ನದ

ಪದಕಗಳನ್ನು ನನ್ನ ತಂದೆ, ತಾಯಿಗೆ ಸಮರ್ಪಿಸುತ್ತೇನೆ. ನನಗೆ ತುಂಬ ಸಂತೋಷ ಆಗುತ್ತಿದೆ. ನಿರಂತರ ಓದು, ಅಧ್ಯಾಪಕರ ಒಳ್ಳೆಯ ಮಾರ್ಗದರ್ಶನದಿಂದ ಈ ಸಾಧನೆ ಮಾಡಲು ಸಾಧ್ಯವಾಗಿದೆ. ನಿತ್ಯ 6 ಗಂಟೆ ಓದುತ್ತಿದ್ದೆ. ಪರೀಕ್ಷೆ ಸಮೀಪಿಸುತ್ತಿದ್ದಂತೆ ಹೆಚ್ಚು ಸಮಯ ಅಭ್ಯಾಸ ಮಾಡಿದೆ. ಮುಂದೆ ಪ್ರಾಧ್ಯಾಪಕನಾಗುವ ಗುರಿ ಇಟ್ಟುಕೊಂಡಿದ್ದೇನೆ ಎಂದು ಶಿವಶಂಕರ ಕಾಂಬಳೆ ಹೇಳಿದರು.

ಬಾಗಲಕೋಟೆ ಜಿಲ್ಲೆ ಬೀಳಗಿ ತಾಲೂಕಿನ ಕಾತರಕಿ ಗ್ರಾಮದ ಶ್ರೀದೇವಿ ಅರಕೇರಿ ಗಣಿತ ವಿಷಯದಲ್ಲಿ ಚಿನ್ನದ ಪದಕ ಗೆದ್ದಿದ್ದಾರೆ. ಬಹು ದಿನದ ಪರಿಶ್ರಮಕ್ಕೆ ಇಂದು ಯಶಸ್ಸು ಸಿಕ್ಕಿದೆ. ಇದು ಭವಿಷ್ಯದಲ್ಲಿ ಮತ್ತಷ್ಟು ಸಾಧನೆ ಮಾಡಲು ಮೆಟ್ಟಿಲು. ಮುಂದೆ ಸರ್ಕಾರಿ ಕಾಲೇಜಿನಲ್ಲಿ ಉಪನ್ಯಾಸಕಿ ಆಗಬೇಕು ಎಂದುಕೊಂಡಿದ್ದೇನೆ. ತಂದೆ ಮಾಜಿ ಸೈನಿಕರು, ತಾಯಿ ಗೃಹಿಣಿ ಆಗಿದ್ದಾರೆ. ತರಗತಿಯಲ್ಲಿ ಶಿಕ್ಷಕರು ಹೇಳಿದ್ದು ಗಮನವಿಟ್ಟು ಕೇಳುತ್ತಿದ್ದೆ. ಹಾಸ್ಟೇಲ್ ರೂಮಿಗೆ ಬಂದು ಪುನಃ ಓದಿಕೊಳ್ಳುತ್ತಿದ್ದೆ. ಏನಾದರೂ ಗೊಂದಲ ಇದ್ದರೆ ಉಪನ್ಯಾಸಕರಿಂದ ಪರಿಹರಿಸಿಕೊಳ್ಳುತ್ತಿದ್ದೆ ಎಂದು ಶ್ರೀದೇವಿ ಹೇಳಿದರು.

ನಾನು ವಿಜಯಪುರ ಜಿಲ್ಲೆಯ ಸಾರವಾಡ ಗ್ರಾಮದಲ್ಲಿ ಚಿನ್ನದ ಪದಕ ಪಡೆದ ಮೊದಲ ವಿದ್ಯಾರ್ಥಿನಿ. ಮೊದಲು ನನ್ನದು ಉರ್ದು ಮಾಧ್ಯಮ. ಎಂ.ಬಿ.ಎ ದಲ್ಲಿ ಚಿನ್ನದ ಪದಕ ಸಿಕ್ಕಿದೆ. ಮುಂದೆ ಎಂಎನ್ಸಿ ಕಂಪನಿ ಇಲ್ಲವೇ ಪ್ರಾಧ್ಯಾಪಕಿಯಾಗುವ ಆಶಯವಿದೆ. ನನ್ನ ತಂದೆ-ತಾಯಿ ಓದಿಲ್ಲ, ಆದರೆ, ನನಗೆ ಕಷ್ಟ ಪಟ್ಟು ಓದಿಸಿದ್ದಾರೆ. ಅವರಿಗೆ ಅದೆಷ್ಟು ಕೃತಜ್ಞತೆ ಸಲ್ಲಿಸಿದರೂ ಕಡಿಮೆಯೇ. ಇನ್ನು ನನ್ನ ಅಣ್ಣಾ ನನಗೆ ತುಂಬಾ ಸಹಾಯ ಮಾಡಿದ್ದಾನೆ ಎಂದು ಹೀನಾ ಕೌಸರ್‌ಮೌಲಾಬಿನ್ ತುಬಾಕಿ ಹೇಳಿದರು.

## ಗುತ್ತಿಗೆದಾರರ ಬಿಲ್ ಪಾವತಿ

# ಲೋಕೋಪಯೋಗಿ ಸಚಿವರ ಮೇಲಿನ ಆರೋಪ ಸುಳ್ಳು

ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷರು ಮಾಡಿರುವ ಆರೋಪದ ಬಗ್ಗೆ ಲೋಕೋಪಯೋಗಿ ಇಲಾಖೆಯ ನೋಂದಾಯಿತ ಬಾಗಲಕೋಟೆ ಜಿಲ್ಲೆಯ ಗುತ್ತಿಗೆದಾರರಾದ ನಾವೆಲ್ಲ ಈ ಮೂಲಕ ಸ್ಪಷ್ಟನೆ ನೀಡಲು ಬಯಸುತ್ತೇವೆ.

ನಾವೆಲ್ಲ ಗುತ್ತಿಗೆದಾರರ ಸಂಘದ ಅಧ್ಯಕ್ಷರ ಆರೋಪವನ್ನು ಸ್ಪಷ್ಟವಾಗಿ ಅಲ್ಲಗಳೆಯುತ್ತೇವೆ. ಲೋಕೋಪಯೋಗಿ ಇಲಾಖೆಯ ಸಚಿವರಾದ ಮಾನ್ಯ ಶ್ರೀ ಸತೀಶ ಜಾರಕಿಹೊಳಿಯವರು, ಅಧಿಕಾರ ವಹಿಸಿಕೊಂಡ ಬಳಿಕ, ಇಲ್ಲಿಯವರೆಗೂ ಸಣ್ಣ ಮತ್ತು ಮಧ್ಯಮ ವರ್ಗದ ಗುತ್ತಿಗೆದಾರರ ಬಾಕಿ ಬಿಲ್‌ಗಳನ್ನು ಪ್ರಥಮ ಆದ್ಯತೆ ಮೇರೆಗೆ ಸ್ವತಃ ಮುತುವರ್ಜಿ ವಹಿಸಿ ಪಾವತಿಸಲು ಕ್ರಮ ಕೈಗೊಂಡಿದ್ದಾರೆ.

ಸಚಿವರು ಅಧಿಕಾರ ವಹಿಸಿಕೊಂಡ ವೇಳೆ, ಲೋಕೋಪಯೋಗಿ ಇಲಾಖೆಯಲ್ಲಿ ಸುಮಾರು 2 ಸಾವಿರ ಜನ ಗುತ್ತಿಗೆದಾರರ ಬಿಲ್‌ಗಳು ಬಾಕಿ ಇದ್ದವು. ಇಲ್ಲಿಯವರೆಗೆ ಸುಮಾರು 1500 ಜನ ಗುತ್ತಿಗೆದಾರರ ಬಿಲ್‌ಗಳನ್ನು ಪ್ರಾಯರಿಟಿ ಮೇಲೆ ಪಾವತಿಸಿದ್ದಾರೆ. ಸಧ್ಯ ಲೋಕೋಪಯೋಗಿ ಇಲಾಖೆಯಲ್ಲಿ ಸುಮಾರು 500 ಜನ ದೊಡ್ಡ ಮೊತ್ತದ ಕಾಮಗಾರಿಗಳ ಗುತ್ತಿಗೆದಾರರ ಬಿಲ್‌ಗಳು ಬಾಕಿ ಉಳಿದಿವೆ. ಅದರಲ್ಲೂ ಕೂಡ ಶೇ.50ರಷ್ಟು ಹಣವನ್ನು 31ರ ಮಾರ್ಚ್ 2024ರ ವರೆಗೆ ನಗದೀಕರಿಸಿದ್ದಾರೆ.

ಲೋಕೋಪಯೋಗಿ ಇಲಾಖೆಯಲ್ಲಿ ಬಾಕಿ ಇದ್ದ ಸುಮಾರು 2 ಸಾವಿರ ಜನ ಗುತ್ತಿಗೆದಾರರ ಬಿಲ್‌ಗಳು ಪಾವತಿ ಮಾಡಲು ಕ್ರಮ ಕೈಗೊಂಡು, ಇದೀಗ 31 ಮಾರ್ಚ್ 2024ರ ವರೆಗೆ ಸುಮಾರು 500 ಜನ ದೊಡ್ಡ ಕಾಮಗಾರಿಗಳ ಗುತ್ತಿಗೆದಾರರ ಬಿಲ್ ಮಾತ್ರ ಭಾಗಶಃ ಬಾಕಿ ಉಳಿದಿವೆ. ಈ ವಾಸ್ತವದ ಅಂಕಿ-ಸಂಖ್ಯೆಗಳು, ನೂತನವಾಗಿ ಗುತ್ತಿಗೆದಾರರ ಸಂಘದ ರಾಜ್ಯ ಅಧ್ಯಕ್ಷರಾದ ಶ್ರೀಯುತರಿಗೆ ಮಾಹಿತಿ ಕೊರತೆ ಇದೆ ಎಂಬುದು ನಮ್ಮ ಅನಿಸಿಕೆ. ಲೋಕೋಪಯೋಗಿ ಇಲಾಖೆಯ ಸಚಿವರ ಮೇಲೆ ಆರೋಪ ಮಾಡಿರುವುದರ ಹಿಂದೆ, ಮಾಹಿತಿ ಕೊರತೆಯೇ ಕಾರಣವೆಂದು ನಾವೆಲ್ಲ ತಿಳಿದಿದ್ದೇವೆ.

ಲೋಕೋಪಯೋಗಿ ಇಲಾಖೆಯ ಇತಿಹಾಸದಲ್ಲೇ ಸ್ವತಃ ಸಚಿವರೇ, ಬಾಕಿ ಬಿಲ್‌ಗಳ ಸಮಗ್ರ ಮಾಹಿತಿ ತರಿಸಿಕೊಂಡು, ಮೊದಲು ಸಣ್ಣ ಗುತ್ತಿಗೆದಾರರ ಬಿಲ್‌ಗಳು, ಬಳಿಕ ಮಧ್ಯಮ ಗುತ್ತಿಗೆದಾರರ 31 ಮಾರ್ಚ್ 2024ರ ವರೆಗಿನ ಬಾಕಿ ಬಿಲ್‌ಗಳನ್ನು ಸಂಪೂರ್ಣ ಪಾವತಿಸಲು ಕ್ರಮ ಕೈಗೊಂಡಿದ್ದಾರೆ. ಬಳಿಕ ದೊಡ್ಡ ಮೊತ್ತದ ಕಾಮಗಾರಿಗಳ ಗುತ್ತಿಗೆದಾರರ ಬಿಲ್‌ಗಳ ಪಟ್ಟಿ ಮಾಡಿ, ವಿಶೇಷ ಆಸಕ್ತಿ ವಹಿಸಿ, ಶೇ.50ರಷ್ಟು ಬಾಕಿ ಬಿಲ್‌ಗಳನ್ನು ಪಾವತಿಕರಿಸಿರುತ್ತಾರೆ. ಇದರಿಂದ ಸಣ್ಣ ಹಾಗೂ ಮಧ್ಯಮ ಗುತ್ತಿಗೆದಾರರಿಗೆ ಆಗುತ್ತಿದ್ದ ತೊಂದರೆಯೂ ಬಗೆಹರಿದಿದೆ. ಮಾಹಿತಿ ಕೊರತೆಯಿಂದ ಗುತ್ತಿಗೆದಾರರ ಸಂಘದ ರಾಜ್ಯ ಅಧ್ಯಕ್ಷರು ಮಾಡಿದ ಆರೋಪವನ್ನು ನಾವೆಲ್ಲ ತಳ್ಳಿ ಹಾಕುತ್ತೇವೆ. ಅಲ್ಲದೇ ಇನ್ನೂ 500 ಜನ ದೊಡ್ಡ ಗುತ್ತಿಗೆದಾರರ, ಮಾರ್ಚ್ 2024ಕ್ಕೂ ಹಿಂದಿನ ಬಿಲ್‌ಗಳು ಭಾಗಶಃ ಬಾಕಿ ಇದ್ದು, ಅವುಗಳನ್ನೂ ಪಾವತಿಸಲು ಶೀಘ್ರ ಕ್ರಮ ಕೈಗೊಳ್ಳುವುದು. 31 ಮಾರ್ಚ್ 2024ರ ನಂತರದ ಬಾಕಿ ಬಿಲ್‌ಗಳನ್ನೂ ಸಹ ಪಾವತಿಸಲು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇವೆ ಹಾಗೂ ನಮ್ಮ ಸಂಘದ ರಾಜ್ಯ ಅಧ್ಯಕ್ಷರು, ಸಚಿವರ ಮೇಲೆ ವಿಷಯಾಂತರದ ಆರೋಪ ಮಾಡುವುದನ್ನು ಬಿಟ್ಟು, ಬಾಕಿ ಬಿಲ್ ಪಾವತಿಸಲು ಸರ್ಕಾರ ಮತ್ತು ಸಂಬಂಧಿಸಿದ ಸಚಿವರನ್ನು ಒತ್ತಾಯಿಸಬೇಕು ಎಂದು ಮನವಿ ಮಾಡುತ್ತೇವೆ.

**ಶ್ರೀ ರಾಮಚಂದ್ರ ಎಚ್. ಯಡಹಳ್ಳಿ**
ಪ್ರಥಮ ದರ್ಜೆ ಗುತ್ತಿಗೆದಾರರು ಹಾಗೂ
ಬಾಗಲಕೋಟೆ ಜಿಲ್ಲೆಯ ಇತರೆ ಲೋಕೋಪಯೋಗಿ ಇಲಾಖೆಯ ಗುತ್ತಿಗೆದಾರರು

# 14ರಿಂದ ಹಣ್ಣಿಕೇರಿ ಸಿದ್ದೇಶ್ವರ ಜಾತ್ರಾ ಮಹೋತ್ಸವ

**ಬೈಲಹೊಂಗಲ:** ತಾಲೂಕಿನ ಹಣ್ಣಿಕೇರಿ ಗ್ರಾಮದ ಸಿದ್ದೇಶ್ವರ ಜಾತ್ರಾ ಮಹೋತ್ಸವ ಏ.7ರಿಂದ ಆರಂಭವಾಗಿದ್ದು, 16ರವರೆಗೆ ಹಿರೇಮಠದ ರೇವಣಸಿದ್ದೇಶ್ವರ ಶಿವಾಚಾರ್ಯರ ಸಾನ್ನಿಧ್ಯದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮ ಜರುಗಲಿವೆ. ಏ.7 ರ ರಾತ್ರಿ 11 ಗಂಟೆಯಿಂದ ಪಂಚಾಕ್ಷರಿ ಜಪ ಭಜನೆ ಆರಂಭವಾಗಿದ್ದು, 13ರ ರಾತ್ರಿ 12 ಗಂಟೆಗೆ ಮಂಗಲಗೊಳ್ಳುವುದು. 14ರಂದು ಬೆಳಗ್ಗೆ 1 ಗಂಟೆಯಿಂದ ಭಕ್ತರಿಂದ ಸಿದ್ದೇಶ್ವರ ದೇವರಿಗೆ ಅಭಿಷೇಕ, ಪೂಜಾ ಕಾರ್ಯಕ್ರಮ, ಬೆಳಗ್ಗೆ 10 ಗಂಟೆಗೆ ಮಹಾಪ್ರಸಾದ, ಸಂಜೆ 4 ಗಂಟೆಯಿಂದ ಅಂಬಲಿ ಬಂಡಿಗಳ ಓಡಾಟ, ರಾತ್ರಿ 12 ರಿಂದ ಬುಧವಾರ ಬೆಳಗಿನ 5 ಗಂಟೆಯವರೆಗೆ ಸೋಗಿನ ಬಂಡಿಗಳ ಅದ್ಧೂರಿ ಮೆರವಣಿಗೆ ನಡೆಯಲಿದೆ. ಬೆಳಗ್ಗೆ 11 ಗಂಟೆಯಿಂದ ಕಿಚ್ಚದ ಕಟ್ಟಿಗೆ ತರುವುದು. ಮಧ್ಯಾಹ್ನ 1 ರಿಂದ 6 ಗಂಟೆಯವರೆಗೆ ಕಿಚ್ಚದ ಕಟ್ಟಿಗೆಗಳ ಅದ್ಧೂರಿ ಮೆರವಣಿಗೆ,ರಾತ್ರಿ 10.30ಕ್ಕೆ ಸಾಮೂಹಿಕ ಕಿಚ್ಚ (ಅಗ್ನಿ) ಹಾಯುವ ಕಾರ್ಯಕ್ರಮ ನಡೆಯಲಿದೆ. 16ರಂದು ಬೆಳಗ್ಗೆ 10 ಗಂಟೆಗೆ ನಾಗೋಲಿ ಕಾರ್ಯಕ್ರಮ, ಬಳಿಕ ಸಂಜೆ 7 ಗಂಟೆಯವರೆಗೆ ದೇವರಿಗೆ, ಹೂಮಾಲೆ, ಕಾಯಿ ಅರ್ಪಿಸುವ ಕಾರ್ಯಕ್ರಮ ನಡೆಯಲಿದೆ.

**ಹೆಸರಿನಲ್ಲಿ ಬದಲಾವಣೆ**

ನಾನು, ಪೂಜಾ ಸಿದ್ಧಾರ್ಥ ಶಿಂಧೆ
ಸಾ: ಹುನ್ನರಗಿ, ತಾ: ಚಿಕ್ಕೋಡಿ, ಜಿ: ಬೆಳಗಾವಿ
ನನ್ನ ವಿವಾಹಪೂರ್ವದ ಹೆಸರು
**ಪೂಜಾ ಭೀಮಪ್ಪ ಕಾಂಬಳೆ**
ವಿವಾಹ ನಂತರದ ಹೆಸರು
**ಪೂಜಾ ಸಿದ್ಧಾರ್ಥ ಶಿಂಧೆ**
ಈ ಎರಡು ಹೆಸರುಗಳು ನನಗೆ ಸಂಬಂಧಿಸಿರುತ್ತದೆ
ದಿನಾಂಕ: 09/04/2025 ರಂದು
ಎಲ್. ಕೆ. ಖೋತ
ವಕೀಲರು & ನೋಟರಿ, ರಾಯಬಾಗ
ಅವರ ಮುಂದೆ ಪ್ರಮಾಣಿಸಿ ದೃಢೀಕರಿಸಲಾಗಿದೆ.

**PUBLIC NOTICE**

BE IT KNOWN TO THE PUBLIC AT LARGE, that my client intends to purchase the Residential property bearing Plot No. 26, R.S. No 1290/1A, measuring 20' X 50' in all measuring 1000 Sqfts. Situated at Rukmini Nagar, MME, Beside Ahmediya Masjid Near Vishal Mega Mart, Belagavi, from its Owners 1) Taheera Amirhamza Desai, 2) Nusarat Faizan Bhai, 3) Mustafeez Amirhamza Desai, legal heirs of late Amirhamza Alibagh Desai Residing at Ashok Nagar, Belgaum. Any Person's having any right, claim/objection or interest over the said property may lodge their objections/claims with documentary evidence within 7 (Seven) days to the undersigned. Failing which my client shall complete the transaction of sale and nobody's claim or objection whatsoever nature will be entertained.
Place: Belagavi. Date: 11-04-2025.
Sd/- **Basavaraj V. Mathad (Basu)**
District Deed Writer,
"NEW BASSU ASSOCIATES" Near New Z.P. Office, Kacheri Road, BELAGAVI.
Mob: 9342585494,7019694678

**ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್**
IDFC FIRST Bank
(ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ) CIN : L65110TN2014PLC097792
ನೋಂದಾಯಿತ ಕಛೇರಿ: ಕೆಆರ್‌ಎಂ ಟವರ್ಸ್, 8ನೇ ಮಹಡಿ, ಹ್ಯಾರಿಂಗ್‌ಟನ್ ರಸ್ತೆ, ಚೆಟ್‌ಪೇಟ್, ಚೆನ್ನೈ-600031. ದೂ: +91 44 4564 4000/ ಫ್ಯಾಕ್ಸ್ : +91 44 4564 4022

**ಅಪೆಂಡಿಕ್ಸ್-IV [ನಿಯಮ-8(1)]**
**ಸ್ವಾಧೀನ ಸೂಚನೆ (ಸ್ಥಿರ ಆಸ್ತಿಗಾಗಿ)**

ಆದಾಗ್ಯೂ ಕೆಳಸಹಿದಾರರು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್‌ನ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಪ್ರಸ್ತುತ ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ.) ಅಧಿಕೃತ ಅಧಿಕಾರಿಯಾಗಿ ಹಣಕಾಸು ಆಸ್ತಿಗಳ ಪ್ರಭೂತೀಕರಣ ಮತ್ತು ಪುನರ್ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ನಿರ್ಮಾಣ ಕಾಯಿದೆ, 2002 (ಆ್ಯಕ್ಟ್) ರಡಿ ಮತ್ತು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002ರ (ರೂಲ್ 3) ನಿಯಮ ಜೊತೆ ಓದಿಕೊಳ್ಳಬೇಕಾದ ಸದರಿ ಕಾಯಿದೆಯ ಪರಿಚ್ಛೇದ 13(12)ರಡಿ ಪ್ರದತ್ತವಾದ ಅಧಿಕಾರಗಳಂತೆ ಕೆಳಕಂಡಂತೆ ಸೂಚಿಸಲಾದ ಸಾಲಗಾರರಿಗೆ/ ಸಹ-ಸಾಲಗಾರರಿಗೆ ಮತ್ತು ಜಾಮೀನುದಾರರಿಗೆ ಸಾಲದ ಒಪ್ಪಂದ ಪತ್ರದ ಅನುಸಾರ ಮಂಜೂರಾದ ಸಾಲವನ್ನು ಮತ್ತು ಸಂಬಂಧಿಸಿದ ಡಿಮಾಂಡ್ ನೋಟೀಸ್‌ನಲ್ಲಿ ಒತ್ತಾಯಿಸಿರುವಂತೆ ಬಾಕಿಯಾಗಿರುವ ಮೊಬಲಗು ಮತ್ತು ಡಿಮಾಂಡ್ ನೋಟೀಸಿನ ದಿನಾಂಕದಿಂದ ಪೂರ್ತಿ ಪಾವತಿ/ ತೀರುವಳಿವರೆಗೂ ತದನಂತರದ ಬಡ್ಡಿ ಮತ್ತು ಇತರ ಚಾರ್ಜುಗಳು ಸೇರಿದ ಮೊತ್ತ ಸದರಿ ನೋಟೀಸ್‌ಗಳನ್ನು ಸ್ವೀಕರಿಸಿದ 60 ದಿನಗಳೊಳಗಾಗಿ ಪಾವತಿ ಮಾಡಲು ಸೂಚಿಸಿದ್ದರು.
ಸಾಲಗಾರರು/ಸಹ-ಸಾಲಗಾರರು ಜಾಮೀನುದಾರರು ಬಾಕಿ ಸಾಲದ ಮೊತ್ತವನ್ನು ಮರುಪಾವತಿ ಮಾಡಲು ವಿಫಲರಾಗಿರುತ್ತಾರೆ ಈ ಕಾರಣ ಸಾಲಗಾರರಿಗೆ/ಸಹ-ಸಾಲಗಾರರಿಗೆ/ಜಾಮೀನುದಾರರಿಗೆ ಮತ್ತು ಸಾರ್ವಜನಿಕರಿಗೆ ವಿಶೇಷವಾಗಿ ಸೂಚಿಸುವುದೇನೆಂದರೆ, ಕೆಳಸಹಿದಾರರು ಸದರಿ 2002ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 8ರ ಜೊತೆ ಓದಿಕೊಳ್ಳಬೇಕಾದ ಸದರಿ ಕಾಯಿದೆಯ ಸೆಕ್ಷನ್ 13ರ ಉಪ-ಬಂಧ (4)ರಡಿ ಅವನಿಗೆ/ಅವಳಿಗೆ ಪ್ರದತ್ತವಾದ ಅಧಿಕಾರಗಳಂತೆ/ಕೆಳಕಂಡಂತೆ ವಿವರಿಸಲಾದ ಆಸ್ತಿಗಳನ್ನು ಸ್ವಾಧೀನಕ್ಕೆ ಪಡೆದುಕೊಂಡಿರುತ್ತಾರೆ.

| ಸಾಲದ ಖಾತಾ ಸಂಖ್ಯೆ | ಸಾಲಗಾರರು/ಸಹ- ಸಾಲಗಾರರು/ ಮತ್ತು ಜಾಮೀನುದಾರರ ಹೆಸರು | ಅಡಮಾನಿತ ಆಸ್ತಿಗಳ ವಿವರ | ಡಿಮಾಂಡ್ ನೋಟೀಸ್ ದಿನಾಂಕ | ಡಿಮಾಂಡ್ ನೋಟೀಸ್ ಬಾಕಿ ಮೊತ್ತ (ರೂ.) | ಸ್ವಾಧೀನತೆಯ ವಿಧ ಮತ್ತು ದಿನಾಂಕ |
|---|---|---|---|---|---|
| 37918616 | 1. ಶ್ರೀ ಝಾಕೀರ್‌ಹುಸೈನ್ ರುಕುಂದಿ 2. ಶ್ರೀಮತಿ ಸಬಿಯಾ ರುಕುಂದಿ | ಸಕಲ ಸಮಸ್ತವೂ ಸೇರಿದಂತೆ ವಿಪಿಸಿ ಸಂ. 3773, ಕುಡುಚಿ ಗ್ರಾಮಾಂತರ, ಗ್ರಾಮದ ಪ್ರದೇಶ 60x70 ಚ.ಅ. ತಾಲ್ಲೂಕು: ರಾಯ್‌ಬಾಗ್, ಜಿಲ್ಲೆ- ಬೆಳಗಾವಿ, ಕರ್ನಾಟಕ-591311, ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಸ್ವಂತ ಭೂಮಿ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಸಿರಾಜುದ್ದಿ ರುಕುಂದಿ, ದಕ್ಷಿಣಕ್ಕೆ: ಇಲಿಯಾಸ್ ಜೆನಾಬಾಡೆ | 28.12.2024 | ರೂ. 3,73,009.54/- | 05-04-2025 ಸಾಂಕೇತಿಕ ಸ್ವಾಧೀನತೆ |
| 39159801 | 1. ರವಸಾಹೇಬ್ ಶ್ರೀಕಾಂತ್ ಪಾಟೀಲ್ 2. ರಾಜೇಂದ್ರ ಶ್ರೀಕಾಂತ್ ಪಾಟೀಲ್ 3. ಸಂಗೀತ ರಾಜೇಂದ್ರ ಪಾಟೀಲ್ | ಸಕಲ ಸಮಸ್ತವೂ ಸೇರಿದಂತೆ ಗೃಹಾಸ್ತಿ ವಿ.ಪಿ.ಸಿ. ಸಂ.2087, ಆಳತೆ 48x38 ಅಡಿ, ಅಂದರೆ 1824 ಚ.ಅ. ಗ್ರಾಮ: ಉಗಾರ್ ಬುಡ್ರಕ್, ತಾ: ಅಥಣಿ, ಜಿಲ್ಲೆ: ಅಥಣಿ, ಜಿಲ್ಲೆ: ಬೆಳಗಾವಿ, ಬೆಳಗಾವಿ, ಕರ್ನಾಟಕ-591316 ಮತ್ತು ಮತ್ತು ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಸ್ವಂತ ಭೂಮಿ, ಉತ್ತರಕ್ಕೆ: ಸ್ವಂತ ಭೂಮಿ, ದಕ್ಷಿಣಕ್ಕೆ: ರಸ್ತೆ. | 11.12.2024 | ರೂ. 5,61,201.28/- | 05-04-2025 ಸಾಂಕೇತಿಕ ಸ್ವಾಧೀನತೆ |

ಸಾಲಗಾರರಿಗೆ/ ಸಹ-ಸಾಲಗಾರರಿಗೆ/ ಜಾಮೀನುದಾರರಿಗೆ ಮತ್ತು ಅಲ್ಲದೆ ವಿಶೇಷವಾಗಿ ಸಾರ್ವಜನಿಕರಿಗೆ ನೀಡುವ ಎಚ್ಚರಿಕೆ ಏನೆಂದರೆ ಸದರಿ ಆಸ್ತಿಯೊಂದಿಗೆ ಯಾರು ಯಾವುದೇ ವ್ಯವಹಾರ ಮಾಡಬಾರದು ಹಾಗೂ ಮಾಡಿದ್ದೇ ಆದರೆ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್‌ನ (ಹಿಂದಿನ ಕ್ಯಾಪಿಟಲ್ ಫಸ್ಟ್ ಹೋಂ ಫೈನಾನ್ಸ್ ಲಿಮಿಟೆಡ್ ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ) ಡಿಮಂಡ್ ನೋಟೀಸಿನ ದಿನಾಂಕದಿಂದ ಪೂರ್ತಿ ಪಾವತಿಯಾಗುವವರೆಗೂ ಬಾಕಿ ಮೊಬಲಗು/ಇತರೆ ಚಾರ್ಜುಗಳು ಸೇರಿದ ಮೊತ್ತಕ್ಕೆ ಬಾಧ್ಯರಾಗಬೇಕಾಗುತ್ತದೆ.

ದಿನಾಂಕ: 05-04-2025
ಸ್ಥಳ: ಕರ್ನಾಟಕ

ಸಹಿ/-ಅಧಿಕೃತ ಅಧಿಕಾರಿ
ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್
(ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವ